ಓಎಸ್ 196/2022

ಡಿಡಬ್ಲ್ಯೂ 1

**ಸಾಕ್ಷಿಯು ದಿಃ 17.11.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ವಾದಿಗಳ ಪರ ವಕೀಲರಿಂದ**

ನನ್ನ ಹಿಂದಿನ ಪಾಟೀ ಸವಾಲಿನಲ್ಲಿ ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎಂದು ಸಾಕ್ಷಿ ನೀಡಿದ್ದು ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿಲ್ಲ ಮುಂದೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಿಡಿ 1 ದಾಖಲೆಯನ್ನು ಯಾವ ದಿನಾಂಕದಂದೂ ವಿತರಿಸಲಾಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಿಡಿ 1 ದಾಖಲೆಯನ್ನು ಕೋರಿ ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದೇನೆ ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಗ್ರಾಮ ಪಂಚಾಯಿತಿ ಕಾರ್ಯದರ್ಶಿಗೆ ಸರ್ವೇ ನಂಬರ್ ಜಮೀನಿನ ಚೆಕ್ಕುಬಂದಿ ದೃಢಿಕರಣವನ್ನು ನಿಡಿ 2 ರಂತೆ ಕೊಡಲು ಅಧಿಕಾರ ಇಲ್ಲ ಎಂದರೆ ಸಾಕ್ಷಿಯು ನಿಡಿ 2 ದಾಖಲೆಯು ಅಸ್ಸೆಸ್ಮೆಂಟ್ ನಂಬರ್ ಗೆ ಸಂಬಂಧಿಸಿದ್ದಾಗಿದೆ ಎಂದು ನುಡಿಯುತ್ತಾರೆ. ನಿಡಿ 2 ರಲ್ಲಿ ಸರ್ವೇ ನಂಬರ್ 2/2 ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಹೌದು ಅದು ಅಸ್ಸೆಸ್ಮೆಂಟ್ ಆಸ್ತಿಗೆ ಸಂಬಂಧಿಸಿದ್ದಾಗಿದೆ ಎಂದು ನುಡಿಯುತ್ತಾರೆ. ನಿಡಿ 2 ರಲ್ಲಿ ಅಸ್ಸೆಸ್ಮೆಂಟ್ ಎಂಬ ಪದವನ್ನು ಬ್ರಾಕೇಟ್ ಒಳಗಡೆ ಬರೆಯಲಾಗಿದೆ ಎಂದರೆ ಸರಿ. ನಿಡಿ 2 ದಾಖಲೆಯನ್ನು ಕೊಡುವ ಸಮಯದಲ್ಲಿ ಯಾರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದರು ಎಂದು ನನಗೆ ಗೊತ್ತಿಲ್ಲ. ನಿಡಿ 2 ರಲ್ಲಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಂದು ಬರೆದರುವ ಸ್ಥಳದಲ್ಲಿರುವ ಸಹಿಯು ಫೋರ್ಜರಿ ಸರಿಯಾಗಿರುತ್ತದೆ ಎಂದರೆ ಸರಿಯಲ್ಲ.

2. ಸಾಮಾನ್ಯವಾಗಿ ಗ್ರಾಮ ಪಂಚಾಯಿತಿ ನಡವಳಿಗಳನ್ನು ರೆಗ್ಯೂಲೇಶನ್ ಬುಕ್ ನಲ್ಲಿ ಬರೆಯಲಾಗುತ್ತದೆ ಎಂದರೆ ಸರಿ. ಅದೇ ರೀತಿ ಆ ದಿನ ಸಭೆಗೆ ಹಾಜರಾದ ಎಲ್ಲ ಗ್ರಾಮ ಪಂಚಾಯಿತಿ ಸಧಸ್ಯರ ಸಹಿಗಳನ್ನು ಸಹ ಸಭಾ ನಡವಳಿಗಳಿಗೆ ಪಡೆಯಲಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಪಂಚಾಯತಿ ಸಧಸ್ಯರ ಸಹಿಗಳನ್ನು ಪಡೆದ ನಂತರ ಸಭಾ ನಡವಳಿಗಳಿಗೆ

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸಹ ಸಹಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ 3 ದಾಖಲೆಯಲ್ಲಿ ಆ ದಿನ ಸಭೆಗೆ ಯಾರು ಯಾರು ಸಧಸ್ಯರು ಹಾಜರಾಗಿದ್ದರು ಮತ್ತು ಸಭಾ ನಡವಳಿಗಳನ್ನು ಯಾರು ಬರೆದರು ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಡಿ 3 ದಾಖಲೆಯ ದೃಡೀಕೃತ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಡಿ 3 ದಾಖಲೆಯಲ್ಲಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಂಬಲ್ಲಿನ ಸಹಿಗಳು ನಕಲಿ ಸಹಿಗಳಾಗಿರುತ್ತವೆ ಎಂದರೆ ಸರಿಯಲ್ಲ.

3. ಸಾಮಾನ್ಯವಾಗಿ ಯಾವುದೇ ಜಮೀನಿನ ಹದ್ದು ಬಸ್ತನ್ನು ಗುರುತಿಸುವವರು ಭೂ ಮಾಪನ ಅಧಿಕಾರಿಗಳಾಗಿರುತ್ತಾರೆ ಎಂದರೆ ಸರಿ. ನಿಡಿ-4 ರಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಜಮೀನಿನ ಹದ್ದು ಬಸ್ತಿನ ಬಗ್ಗೆ ದಾಖಲೆ ನೀಡಿದ್ದು ಅವರಿಗೆ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 4 ದಾಖಲೆಯಲ್ಲಿ ತಾಲ್ಲೂಕು ಭೂ ಮಾಪನ ಅಧಿಕಾರಿ ರವರ ಸಹಿ ಇರುವುದಿಲ್ಲ ಎಂದರೆ ಸರಿ. ನಿಡಿ 5 ರಲ್ಲಿ ನಮೂದಿಸಿರುವಂತೆ ಯಾರೆಲ್ಲ ಮಹಜರ್ ಗೆ ಬಂದಿದ್ದರು ಎಂದರೆ ಸಾಕ್ಷಿಯು ಮಸೀದಿಯವರು ಮತ್ತು ಪಂಚಾಯಿತಿಯವರು ಬಂದಿದ್ದರು ಎಂದು ನುಡಿಯುತ್ತಾರೆ. ನಿಡಿ 5 ದಾಖಲೆಗೆ ಮಸೀದಿಯವರು ಮತ್ತು ಪಂಚಾಯಿತಿಯವರು ಸಹಿ ಮಾಡಿಲ್ಲ ಎಂದರೆ ಸಾಕ್ಷಿಯು ಸಹಿ ಇಲ್ಲ ಅದಕ್ಕೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಾತ್ರ ಸಹಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಿಡಿ 5 ರಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಂಬಲ್ಲಿರುವ ಸಹಿ ಕೂಡ ನಕಲಿ ಸಹಿಯಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ 5 ರ ಮಹಜರ್ ಕಾಪಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಅದು ಪಂಚಾಯಿತಿಯಲ್ಲಿ ಇರುತ್ತದೆ ನಮಗೆ ಕೊಡುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ 5 ರ ಮಹಜರ್ ಕಾಪಿಯನ್ನು ಕೊಡಿ ಎಂದು ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಆ ರೀತಿ ಅರ್ಜಿ ಸಲ್ಲಿಸಿದ್ಕೆ ನಿಡಿ 5 ರ ಮಹಜರ್ ಕಾಪಿಯನ್ನು ನೀಡಿದ್ದಾರೆ ಎಂದು ನುಡಿಯುತ್ತಾರೆ. ಆ ರೀತಿ ಅರ್ಜಿ ಸಲ್ಲಿಸಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಿಡಿ-4 ಮತ್ತು 5 ದಾಖಲೆಗಳು ನಕಲಿ ದಾಖಲೆಗಳಾಗಿವೆ ಮತ್ತು ಆ ದಿನ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ.

4. ನಿಡಿ 7 ದಾಖಲೆಯು ವಾದಿಯ ಜಮೀನಿನ ಉತ್ತರ ದಿಕ್ಕಿಗೆ ಇರುವ ಜಮೀನಿಗೆ ಸಂಬಂಧಿಸಿದ್ದಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ 7 ಮತ್ತು 9 ದಾಖಲೆಗಳಿಗೂ ಒಂದಕ್ಕೊಂದು ಹೊಂದಾಣಿಕೆಯಾಗುತ್ತಿಲ್ಲ ಎಂದರೆ ಸರಿಯಲ್ಲ. ನಿಡಿ 10 ದಾಖಲೆಯಲ್ಲಿ ಮಸೀದಿಯ ಅಧ್ಯಕ್ಷರ ಸೀಲ್ ಇಲ್ಲ ಎಂದರೆ ಸಾಕ್ಷಿಯು ಆಗ ಕ್ಯಾಜ್ವಲ್ ಆಗಿ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿಡಿ 10 ದಾಖಲೆಯಲ್ಲಿ ಯಾವುದೇ ಆಸ್ತಿಯ ಅಸೆಸ್ಮೆಂಟ್ ನಂಬರ್ ನಮೂದಿಸಿಲ್ಲ ಎಂದರೆ ಸರಿ. ನಾನು ಪಂಚಾಯಿತಿ ಎನ್.ಓ.ಸಿ ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆಗಳಿಗೆ ಫೋರ್ಜರಿ ಸಹಿ ಮಾಡಿದ್ದೇನೆ ಎಂದು ಬೇಗೂರು ಪಂಚಾಯಿತಿಯವರು ಬೇಗೂರು ಪೊಲೀಸ್ ಠಾಣೆಗೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಸೆಸ್ಕಾಂ ರವರಿಗೆ ದಿಃ 25.06.2025 ರಂದು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಕ್ಲೇಮು ಮಾಡುತ್ತಿರುವ ಆಸ್ತಿ ಸರ್ವೇ ನಂಬರ್ 2/2 ಸ್ವತ್ತು ವಾದಿಗೆ ಸೇರಿದ ಜಮೀನಿನ ಉತ್ತರ ದಿಕ್ಕಿನಲ್ಲಿ ರಸ್ತೆ ಒಳತಾಕಿನಲ್ಲಿ ಇದೆ ಎಂದರೆ ಸರಿಯಲ್ಲ. ಹಾಗಾಗಿ ಸರ್ವೇ ನಂಬರ್ 2/2 ಆಸ್ತಿಯನ್ನು ಯಾವುದೇ ಕಾಲದಲ್ಲಿ ಹದ್ದು ಬಸ್ತ್ ಮಾಡಲು ಜಾಗ ಗುರುತಿಸಿಕೊಳ್ಳಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ಹದ್ದು ಬಸ್ತ್ ಮಾಡಿದ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸೇರಿದ ದಾವ ಆಸ್ತಿಯನ್ನು ಅನಾವಶ್ಯಕವಾಗಿ ಕ್ಲೇಮು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ